ತಂಗಿಯ ಮೇಲೆ ಸುರಿಸಿ, "ನಿನ್ನ ಹಿತ ಕಾಯಲು ನಾನಿದ್ದೀನಿ" ಅನ್ನುವ ಸಾಂತ್ವನದ ಮಾತಾಡಿ, ಆಡಿದ್ದನ್ನು ಚಾಚೂ ತಪ್ಪದೆ ಇವತ್ತಿನವರೆಗೆ ಪಾಲಿಸಿಕೊಂಡು ಬಂದಿರುವ ಕುರಿತು ಭಟ್ಟರಿಗೆ ಸಹಜವಾಗಿ ಗರ್ವ ಇದೆ ಎಂದರೆ ಸುಳ್ಳೇನಲ್ಲ, ತಪ್ಪೂ ಅಲ್ಲ.

ಸರಕ್ಕನೆ ಬ್ರೇಕ್ ಒತ್ತಿ ಮುಂದಿದ್ದ ಕಾರಿಗೆ ಗುದ್ದುವುದನ್ನು ಕೂದಲೆಳೆಯ ಅಂತರದಲ್ಲಿ ತಪ್ಪಿಸಿ, ಬದಿಗೆ ನುಸುಳಿ ವಾಹನವನ್ನು ಮುಂದಕ್ಕೋಡಿಸಿದ ಚಾಲಕ. ಮುಗ್ಗರಿಸಿ ಬೀಳುವಂತಾದ ಸದಾಶಿವ ಭಟ್ಟರು ಸಾವರಿಸಿಕೊಂಡು ಮೇಲಿನ ಕಂಬಿಯನ್ನು ಬಿಗಿ ಹಿಡಿದು ಕೂತರು. 'ಮಕದ ಮೇಲೆ ಕಣ್ಣಿಲ್ಲನೋ ನಿಂಗೆ?' ಎನ್ನುವ ಅಸಹನೆಯ ಮಾತು ತುಟಿ ಮೀರಿ ಈಚೆ ಬರದೆ ಗಂಟಲಿನೊಳಗೇ ಉಳಿದುಕೊಂಡಿತು. ತಮ್ಮ ಹಳ್ಳಿಊರಲ್ಲಿ ತಾವು ದೊಡ್ಡ ಜನ. ಐದೆಕರೆ ಅಡಿಕೆ ತೋಟ, ಎಂಟೆಕರೆ ಗದ್ದೆ ಇರುವ ಜಮೀನ್ದಾರರು. ಯಾರಿಗೆ ಬೇಕಾದರೂ ಉಛಾಯಿಸಿ ಒಂದು ಮಾತು ಹೇಳುವ, ಹೇಳಿದ್ದನ್ನು ಜೀರ್ಣಿಸಿಕೊಳ್ಳುವ ತಾಕತ್ತು ಉಂಟು. ಹೇಳಿಕೇಳಿ ಇದು ಬೆಂಗಳೂರು ಪಟ್ಟಣ. ಅಪರಿಚಿತ ಜನರೊಂದಿಗೆ ವ್ಯವಹರಿಸುವುದೆಂದರೆ ಈ ವಯಸ್ಸಲ್ಲೂ ಉಳಿದುಕೊಂಡಿರುವ ಯಾವುದೋ ಹಿಂಜರಿಕೆ. ಮುಜುಗರ. ಹಾಗೆ ವ್ಯವಹರಿಸಿ ಅಭ್ಯಾಸ ಇದ್ದರೆ ತಾನೇ? ಹೀಗೆನಿಸುತ್ತಿದ್ದಂತೆ ಅಚಾನಕ್ಕಾಗಿ ನೆನಪಾದವನು ಅಳಿಯ ನಾಗಭೂಷಣ. 'ಬೇಡ' ಎಂದು ಕೈಯಾಡಿಸಿದ ಬೆಂಗಳೂರು ಪಟ್ಟಣದ ವರಮಹಾಶಯನ ಹೆಸರು ತಮ್ಮ ಮಗಳ ಹಣೆಯಲ್ಲಿ ಬರೆದಿದ್ದರೆ ತಪ್ಪಿಸಲು ತಾವ್ಯಾರು? 'ಎಂಜಿನಿಯರ್ ಅಂತೆ' ಅಂದಕೂಡಲೆ ಕಿವಿ ಜೋತು ಬಿಟ್ಟಿದ್ದಳು ರಜನಿ. ತಮ್ಮ ಒಳಮನಸ್ಸಲ್ಲೂ ಒಂದು ಪ್ರತೀಕಾರದ ಭಾವನೆ ಅಡಗಿ ಕೂತಿತ್ತಾ? ಇರಬಹುದೇನೋ. ಸೋದರಳಿಯ ಬದುಕಿನಲ್ಲಿ ನೆಲೆ ಕಂಡುಕೊಂಡಾಗ ಅವನೊಡನೆ ಭಟ್ಟರು ತಮ್ಮ ಮನದಿಂಗಿತ ಪ್ರಸ್ತಾಪಿಸಿದ್ದರು.

"ತಪ್ಪು ತಿಳ್ಕೋಬೇಡಿ ಮಾವ, ರಜನಿ ನನ್ನ ತಂಗಿ ಇದ್ದ ಹಾಗೆ. ಅವಳನ್ನ ಮದುವೆಯಾಗೋ ಯೋಚನೆ ಯಾವತ್ತೂ ನಂಗಿರ್ಲಿಲ್ಲ. ಆ ದೃಷ್ಟೀಲಿ ಅವಳನ್ನ ನಾನು ನೋಡೇ ಇಲ್ಲ..." ಭಟ್ಟರು ನಿರೀಕ್ಷಿಸಿರದ ನಕಾರಾತ್ಮಕ ಉತ್ತರ ಸತೀಶನಿಂದ ಬಂದಿತ್ತು.

ಸ್ವಂತ ತಂಗಿಯ ಮಗ, ಚೋಟುದ್ದ ಇದ್ದವನನ್ನು ಸಮೃದ್ಧ ಹಾಲು, ತುಪ್ಪ ತಿನ್ನಿಸಿ, ಸೈಂಧವನ ಹಾಗೆ ಬೆಳೆಸಿ, 'ಓದುತ್ತೇನೆ' ಅಂದಷ್ಟು ಓದಿಸಿ, ಯಾವತ್ತಾದರೂ, ಯಾವುದಕ್ಕಾದರೂ ಕೈ ಚೊಟ್ಟ ಮಾಡಿದ್ದಿತ್ತಾ? ಈ ಕಾಲದಲ್ಲಿ ಎಲ್ಲುಂಟು ಕೃತಜ್ಞತೆ? 'ಹಕ್ಕಿನ ಹುಡುಗ' ಅಂದುಕೊಂಡಿದ್ದವನು ಕೈ ಕೊಟ್ಟುಬಿಟ್ಟ. ಒಳಗುಟ್ಟು ಬೇರೆಯೇ ಇದೆ ಎಂದು ಗೊತ್ತಾಗಿದ್ದು ಆಮೇಲೆ. ತಾನಿದ್ದ ಕಂಪೆನಿಯಲ್ಲಿ ತನ್ನ ಜೊತೆ ಕೆಲಸ ಮಾಡುತ್ತಿದ್ದ ಅನ್ಯಜಾತಿಯ ಹುಡುಗಿಯೊಬ್ಬಳನ್ನು ಪ್ರೀತಿ ಮಾಡುತ್ತಿದ್ದನಂತೆ. ತಮ್ಮ ಹಂಗಿನ ಋಣ ಹೊತ್ತಿದ್ದ ಸೀತೆ ಕೂಡಾ ಗುಟ್ಟುಗುಟ್ಟು ಮಾಡಿದಳು. ಎಷ್ಟಾದರೂ ಮಗ ಮಗನೇ.

"ಸಂಬಂಧದಲ್ಲಿ ಮದುವೆ ಆಗ್ಬಾರ್ದು ಅಂತಾರಲ್ಲ ಅಣ್ಣ? ಹುಟ್ಟೋ ಮಕ್ಕಳು ಊನ ಆಗ್ತಾವೆ ಅಂತಾರಲ್ಲ? ಇಲ್ದಿದ್ರೆ ರಜನಿಯಂತಾ ಹುಡುಗಿ ಸೊಸೆ ಆಗ್ತಾಳೇಂದ್ರೆ ಯಾರಿಗೆ ಬೇಡ?" ಅತ್ತಲೂ ಒಪ್ಪ ಇಟ್ಟುಕೊಂಡು, ಇತ್ತಲೂ ಒಪ್ಪ ಇಟ್ಟುಕೊಳ್ಳುವ ಮಾತಾಡಿ, ಸುಮ್ಮನಿರಬಹುದಿತ್ತು ಭಟ್ಟರು. ಆದರೆ ನಾಲಿಗೆ ತುರಿಸಿದ ಹಾಗಾಗಿ ಕೇಳಿಯೇ ಬಿಟ್ಟಿದ್ದರು,

"ಹಂಗಾರೆ ಊನ ಇರೋ ಮಕ್ಕಳು ಹುಟ್ಟಿದೋರೆಲ್ಲಾ ಸಂಬಂಧದಲ್ಲಿ ಮದುವೆ ಆದೋರಾ?"

ಇಷ್ಟು ಸಣ್ಣ ಆಗಿತ್ತು ಸೀತೆಯ ಮುಖ. ತಪ್ಪಿತಸ್ಥ ಭಾವನೆಯನ್ನು ಮುಖದಲ್ಲಿ ತುಳುಕಿಸುತ್ತಾ,